ಓ ಎಸ್ ನಂ 117/2018

ಡಿ. ಡಬ್ಲ್ಯೂ ಃ 2

ದಿಃ 09.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ

ಪ್ರಸ್ತುತ ದಾವೆಯನ್ನು ವಾದಿ ವಿಭಾಗ ಕೇಳಿ ಹಾಕಿರುತ್ತಾರೆ. ವಾದಿ ನನ್ನ ಅಣ್ಣನಾಗಿರುತ್ತಾರೆ. ಪ್ರಸ್ತುತ ದಾವೆಯನ್ನು 5 ಐಟಂ ಸ್ವ ತ್ತುಗಳ ಮೇಲೆ ವಾದಿ ಹೂಡಿರುತ್ತಾರೆ. ನಾನು, ಪ್ರತಿವಾದಿ 2 ಮತ್ತು 5 ರವರು ಸೇರಿ ಒಂದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಪ್ರತಿವಾದಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸುವಾಗ ತಯಾರಿ ಮಾಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ.

ಸ.ನಂ. 106 ರ 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ನಾನು ಒಂದು ದಾವೆಯನ್ನು ಜೂನಿಯರ್ ಡಿವಿಷನ್ ಮಾಗಡಿಯ ಸಿವಿಲ್ ನ್ಯಾಯಾಧೀಶರ ಮುಂದೆ ಹೂಡಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು ನಮ್ಮ ಜಮೀನಿಗೆ ವಾದಿ ತೊಂದರೆ ಮಾಡುತ್ತಿದ್ದ ಕಾರಣ ಹೂಡಿರುತ್ತೇವೆ. ಸದರಿ ದಾವೆಯಲ್ಲಿ ಮದ್ಯಂತರ ಅರ್ಜಿಯನ್ನು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿ ನಾನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿ ವಜಾ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಅರ್ಜಿ ವಜಾ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿ ಏನು ಆಗಿರುತ್ತದೆ ಎಂದು ನಾನು ನಮ್ಮ ವಕೀಲರಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ.

1980 ರಲ್ಲಿ ವಿಭಾಗ ಆಗಿದೆ ಎಂದು ತೋರಿಸಲು ಯಾವ ದಾಖಲಾತಿಗಳನ್ನು ನೀಡಿರುತ್ತೇನೆ ಎಂದರೆ ಸಾಕ್ಷಿ ದಾಖಲಾತಿಗಳು ಇರುವುದಿಲ್ಲ, ನಮ್ಮ ಪಾಲಿಗೆ ಬಂದ ಆಸ್ತಿಯನ್ನು ನಾವು ಉಳುಮೆ ಮಾಡುತ್ತಿದ್ದೇವೆ, ಅವರಿಗೆ ಬಂದ ಆಸ್ತಿಯಲ್ಲಿ ಅವರು ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಲಿಖಿತ ಹೇಳಿಕೆಯಲ್ಲಿ ಸದರಿ 1980 ರಲ್ಲಿ ಆಗಿದೆ ಎಂದು ಹೇಳಿರುವ ವಿಭಾಗದಲ್ಲಿ ಯಾರಿಗೆ ಎಷ್ಟು ಸ್ವತ್ತಿನ ಸ್ವಾಧೀನ, ಚೆಕ್ ಬಂದಿಯ ಬಗ್ಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಹೇಳಿರುವುದಿಲ್ಲ, ಆದರೆ ನಾವು ಪ್ರತ್ಯೇಕ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಹೇಳಿರುವ ಹಾಗೇ ಯಾವುದೆ ವಿಭಾಗವಾಗಿರುವುದಿಲ್ಲ, ಆದ್ದರಿಂದ ಆ ರೀತಿಯಾಗಿ ನನ್ನ

ಪ್ರತಿವಾದಪತ್ರದಲ್ಲಿ ಬರೆಯಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಒಟ್ಟು ಕುಟುಂಬದ ಆಸ್ತಿ ಖರೀದಿ ಮಾಡಿರುವ ಕಾರಣ ನಾನು ವಿಭಾಗವಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವೆಯ 5 ಐಟಂಗಳ ಸ್ವತ್ತುಗಳಲ್ಲಿ ವಾದಿಯೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸುಳ್ಳು. ದಾವಾ ಸ್ವತ್ತುಗಳಲ್ಲಿ ನಾನು ವ್ಯವಸಾಯ ಮಾಡುತ್ತಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ನಾವೇ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಇರುವುದಿಲ್ಲ, ಕಲ್ಕೆರೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಲ್ಕೆರೆಯಲ್ಲಿ ವಾಸವಾಗಿರುತ್ತೇನೆಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ.

ನಾನು ಮೂಲದಿಂದ ಕಲ್ಕೆರೆಯಲ್ಲಿ ವಾಸವಾಗಿರುತ್ತೇನೆ. ನಾನು 25 ನೇ ವಯಸ್ಸಿನಲ್ಲಿ ಮದುವೆಯಾಗಿರುತ್ತೇನೆ. ನಾನು ಮದುವೆಯಾಗುವ ಮುಂಚೆ ಕಲ್ಕೆರೆಯಲ್ಲಿ ಹುಟ್ಟಿ, ಭದ್ರಾವತಿಗೆ ಹೋಗಿರುತ್ತೇನೆ ಎಂದರೆ ಸಾಕ್ಷಿ ನಾನು ಮದುವೆಯಾದ ಮೇಲೆ ಭದ್ರಾವತಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮದುವೆಯಾದ ಮೇಲೆ 2 ವರ್ಷಗಳ ನಂತರ ಭದ್ರಾವತಿಗೆ ಹೋಗಿರುತ್ತೇನೆ. ನಾನು ಭದ್ರಾವತಿಗೆ 5 ವರ್ಷಗಳ ಕಾಲ ಕಲ್ಕೆರೆಯಲ್ಲಿ ಬಿಟ್ಟು ಹೋಗಿರುತ್ತೇನೆ. ನಾನು ಭದ್ರಾವತಿಯಲ್ಲಿ ಸುಮಾರು 20 ವರ್ಷಗಳ ಕಾಲ ಇದ್ದೆ. ಈಗಲೂ ನಾನು ಭದ್ರಾವತಿಯಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಲ್ಕೆರೆಯ ಮನೆಯ ವಿಳಾಸ ಕೊಡಲು ಆಗುತ್ತದೆಯೋ ಎಂದರೆ ಸಾಕ್ಷಿ ಅದರ ವಿಳಾಸದ ನಂಬರ್ ಇಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**